# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 451 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮ ನಿರ್ದೇಶಿತರು) |
| ಉತ್ತರಿಸುವ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು (NH), ರಾಜ್ಯ ಹೆದ್ದಾರಿಗಳು (SH) ಹಾಗೂ ಮುಖ್ಯ ಜಿಲ್ಲಾ ರಸ್ತೆಗಳ (MDR) ಒಟ್ಟು ಸಂಖ್ಯೆ ಮತ್ತು ಕಿಲೋಮೀಟರ್‌ಗಳ ವಿಸ್ತೀರ್ಣವೆಷ್ಟು; (ವಿಭಾಗವಾರು ವಿವರ ನೀಡುವುದು);</td><td>ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು (NH), ರಾಜ್ಯ ಹೆದ್ದಾರಿಗಳು (SH) ಹಾಗೂ ಮುಖ್ಯ ಜಿಲ್ಲಾ ರಸ್ತೆಗಳ (MDR) ಒಟ್ಟು ಸಂಖ್ಯೆ ಮತ್ತು ಕಿಲೋಮೀಟರ್‌ಗಳ ವಿವರಗಳು ಈ ಕೆಳಕಂಡಂತಿದೆ:
<table>
<tr><th>ರಸ್ತೆ ವರ್ಗ</th><th>ರಸ್ತೆಗಳ ಸಂಖ್ಯೆ</th><th>ರಸ್ತೆ ಉದ್ದ (ಕಿಮೀ)</th></tr>
<tr><td>ರಾಷ್ಟ್ರೀಯ ಹೆದ್ದಾರಿಗಳು<br>(NHAI = 4240 + NH = 3684.81)</td><td>49</td><td>7924.81</td></tr>
<tr><td>ರಾಜ್ಯ ಹೆದ್ದಾರಿಗಳು</td><td>307</td><td>28129.00</td></tr>
<tr><td>ಜಿಲ್ಲಾ ಮುಖ್ಯ ರಸ್ತೆಗಳು</td><td>5950</td><td>54864.00</td></tr>
</table></td></tr>
<tr><td>ಆ)</td><td>ರಾಜ್ಯದ ಎಷ್ಟು ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಉನ್ನತೀಕರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪನೆ ಸಲ್ಲಿಸಲಾಗಿದೆ; ಇದರಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತು ಎಲ್ಲೆಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಬಾಕಿ ಇರುವ ಪ್ರಸ್ತಾಪನೆಗಳ ವಿವರವೇ<br>ನು;</td><td>ರಾಜ್ಯದಲ್ಲಿನ ತಾತ್ವಿಕವಾಗಿ ಅನುಮೋದನೆಗೊಂಡ 38 ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲು ಕಾರ್ಯಸಾಧ್ಯತೆಯ ಅಧ್ಯಯನ ಮತ್ತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ ದಿನಾಂಕ:28.07.2017 (28 ರಸ್ತೆಗಳು) ಹಾಗೂ 07.03.2018 (10 ರಸ್ತೆಗಳನ್ನು) ರ ಪತ್ರಗಳಲ್ಲಿ ನಿರ್ದೇಶನ ನೀಡಲಾಗಿರುತ್ತದೆ, ಅದರಂತೆ, ಕಾರ್ಯಸಾಧ್ಯತೆಯ ಅಧ್ಯಯನ ಮತ್ತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿರುತ್ತದೆ. ಈ ಮಧ್ಯೆ, ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ ದಿನಾಂಕ:28.07.2020 ರಂದು ಕಾರ್ಯಸಾಧ್ಯತೆಯ ಅಧ್ಯಯನ ಮತ್ತು ವಿಸ್ತೃತ ಯೋಜನಾ ವರದಿ ತಯಾರಿಸುವ ಕಾರ್ಯವನ್ನು ಅವಧಿ ಪೂರ್ವ ಮುಕ್ತಾಯಗೊಳಿಸಲು ಸೂಚಿಸಿರುತ್ತಾರೆ. ಅದರಂತೆ ಕ್ರಮವಹಿಸಲಾಗಿದೆ.<br><br>ಮುಂದುವರೆದು, ರಾಜ್ಯದಲ್ಲಿನ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲು ಹಲವಾರು ಬಾರಿ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವನ್ನು ಕೋರಲಾಗಿದ್ದು, ಆದರೆ, ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ದಿನಾಂಕ: 14.07.2025 ರ ಪತ್ರದಲ್ಲಿ ಯಾವುದೇ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿರುತ್ತದೆ.</td></tr>
</table>

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಇ) | ಬೆಂಗಳೂರು-ಮೈಸೂರು (10 ಪಥ/ ದಶಪಥ) ಹಾಗೂ ಬೆಂಗಳೂರು-ಹುಬ್ಬಳ್ಳಿ ಪ್ರಮುಖ ಹೆದ್ದಾರಿ ಕಾರಿಡಾರ್‌ಗಳಲ್ಲಿ ಮೂಲ ಯೋಜನೆಯಂತೆ ಸರ್ವೀಸ್ ರಸ್ತೆಗಳ (Service Roads) ಕಾಮಗಾರಿಯನ್ನು ಪೂರ್ಣಗೊಳಿಸದಿರಲು ಕಾರಣಗಳೇನು; | ಈ ವಿಷಯವು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>**ಬೆಂಗಳೂರು-ಮೈಸೂರು ಕಾರಿಡಾರ್‌ಗೆ ಸಂಬಂಧಿಸಿದಂತೆ :**<br>ಬೆಂಗಳೂರು-ಮೈಸೂರು ಎನ್.ಹೆಚ್.275ರಲ್ಲಿ ಸರ್ವೀಸ್ ರಸ್ತೆಗಳನ್ನು ರಿಯಾಯಿತಿ ಒಪ್ಪಂದದ ವಿಧಿಗಳ ಪ್ರಕಾರ ಪೂರ್ಣಗೊಳಿಸಲಾಗಿದೆ. ರೈಲ್ವೆ ಹಳಿಗಳ ಹಾಗೂ ರಸ್ತೆಯ ಇಂಟರ್ ಸೆಕ್ಷನ್‌ಗಳಲ್ಲಿ ಕಿ.ಮೀ.29.481 (ಬಿಡದಿ ಹತ್ತಿರ), ಕಿ.ಮೀ.64.438 (ಚನ್ನಪಟ್ಟಣ ಹತ್ತಿರ) ಮತ್ತು ಕಿ.ಮೀ. 104.099 (ಮಂಡ್ಯ ಹತ್ತಿರ) ಸ್ಥಳಗಳಲ್ಲಿ ಸರ್ವೀಸ್ ರಸ್ತೆಯಲ್ಲಿ ರೈಲ್ವೆ ಮೇಲುಸೇತುವೆ (ROB) ಗಳನ್ನು ಹೆಚ್ಚುವರಿ ಕಾಮಗಾರಿಗಳಾಗಿ ಬೆಂಗಳೂರು-ಮೈಸೂರು ಎನ್.ಹೆಚ್.275ರ ಕಾಮಗಾರಿಗೆ ಸೇರಿಸಲಾಗಿದೆ.<br>ಬೆಂಗಳೂರು-ಮೈಸೂರು ಎನ್.ಹೆಚ್.275ರ ಹೆಚ್ಚುವರಿ ಕಾಮಗಾರಿಗಳನ್ನು M/s. Dhariwal Buildtech Limited ಗೆ ವಹಿಸಲಾಗಿದೆ ಹಾಗೂ Appointed date ಅನ್ನು ದಿನಾಂಕ:20.01.2026 ಎಂದು ಘೋಷಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಪೂರ್ಣಗೊಳಿಸುವ ನಿರೀಕ್ಷಿತ ದಿನಾಂಕ: 16.05.2028<br><br>**ಬೆಂಗಳೂರು-ಹುಬ್ಬಳ್ಳಿ ಕಾರಿಡಾರ್‌ಗೆ ಸಂಬಂಧಿಸಿದಂತೆ**, ಎನ್‌ಎಚ್-48ರ ಸರ್ವೀಸ್ ರಸ್ತೆಯನ್ನು ಸಂಬಂಧಿತ ಯೋಜನೆಯ ರಿಯಾಯಿತಿ ಒಪ್ಪಂದದ ನಿಯಮಾವಳಿಗಳ ಪ್ರಕಾರ ಕಾರ್ಯಗತಗೊಳಿಸಲಾಗಿದೆ. ಆದರೆ ನೆಲಮಂಗಲ-ತುಮಕೂರು ವಿಭಾಗವು ಪ್ರಸ್ತುತ ನಾಲ್ಕು ಮಾರ್ಗದಿಂದ ಆರು ಮಾರ್ಗದ ರಾಷ್ಟ್ರೀಯ ಹೆದ್ದಾರಿಗೆ ನವೀಕರಣಗೊಳ್ಳುತ್ತಿದೆ, ಇದರಲ್ಲಿ ಸರ್ವೀಸ್ ರಸ್ತೆಗಳ ವ್ಯವಸ್ಥೆಯೂ ಒಳಗೊಂಡಿದೆ. ನವೀಕರಣ ಕಾರ್ಯಗಳು ನಡೆಯುತ್ತಿರುವುದಾದರೂ, ಈ ಭಾಗವು ಬಹುತೇಕ ಕಾರ್ಯನಿರ್ವಹಣೆಯಲ್ಲಿದೆ. |
| ಈ) | ಪ್ರಮುಖ ಹೆದ್ದಾರಿಗಳಲ್ಲಿ ಸರ್ವೀಸ್ ರಸ್ತೆಗಳು ಅಪೂರ್ಣಗೊಂಡಿರುವುದರಿಂದ ಸ್ಥಳೀಯ ಗ್ರಾಮಸ್ಥರು, ಕೃಷಿ ಯಂತ್ರೋಪಕರಣಗಳೊಂದಿಗೆ ಸಂಚರಿಸುವ ರೈತರು ಹಾಗೂ ಶಾಲಾ ಮಕ್ಕಳಿಗೆ ತೀವ್ರ ಅನಾನುಕೂಲ ಮತ್ತು ಅಪಘಾತಗಳ ಭೀತಿ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುವಂತೆ ಸ್ಥಳೀಯ ಗ್ರಾಮಸ್ಥರು, ಕೃಷಿ ಯಂತ್ರೋಪಕರಣಗಳೊಂದಿಗೆ ಸಂಚರಿಸುವ ರೈತರು ಹಾಗೂ ಶಾಲಾ ಮಕ್ಕಳ ಸುರಕ್ಷಿತ ಮತ್ತು ನಿರ್ವಿಘ್ನ ಸಂಚಾರಕ್ಕಾಗಿ ನಿರಂತರ ಸರ್ವೀಸ್ ರಸ್ತೆಗಳು ಮತ್ತು ಇತರ ಅಗತ್ಯ ಸೌಕರ್ಯಗಳನ್ನು ಪ್ರತ್ಯೇಕ ರಿಯಾಯಿತಿ ಒಪ್ಪಂದಗಳಲ್ಲಿ MoRT&H & IRC ಮಾರ್ಗಸೂಚಿಗಳ ಪ್ರಕಾರ ಒದಗಿಸಲಾಗಿದೆ.<br>ಕಾಮಗಾರಿ ಜಾರಿಯಲ್ಲಿರುವ ಸ್ಥಳಗಳಲ್ಲಿ Traffic signage, ಬ್ಯಾರಿಕೇಡ್‌ಗಳು ಮತ್ತು ಇತರೆ ರಸ್ತೆ ಭದ್ರತಾ ಕ್ರಮಗಳೊಳಗೊಂಡಂತೆ ತಾತ್ಕಾಲಿಕ ಟ್ರಾಫಿಕ್ ನಿರ್ವಹಣೆಯನ್ನು ಮಾಡಲಾಗುತ್ತಿದೆ. (Temporary Traffic Management Services) |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಉ) | ಸ್ಥಳೀಯ ಸಾರ್ವಜನಿಕರ ಹಿತದೃಷ್ಠಿಯಿಂದ ಈ ಅಪೂರ್ಣ ಸರ್ವಿಸ್ ರಸ್ತೆಗಳು, ಚರಂಡಿ ಹಾಗೂ ಅಂಡರ್‌ಪಾಸ್ (Underpass) ಕಾಮಗಾರಿಗಳನ್ನು ನಿಗಧಿತ ಕಾಲಮಿತಿ ಯೊಳಗೆ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುವಂತೆ ಸಂಬಂಧಪಟ್ಟ ಗುತ್ತಿಗೆದಾರರೊಂದಿಗೆ ಕಾಮಗಾರಿಗಳ ಪ್ರಗತಿ ಪರಿಶೀಲಿಸಲು ಮತ್ತು ಒಪ್ಪಂದ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ನಿಗಧಿತ ಸಮಯದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಯಮಿತ ಪರಿಶೀಲನಾ ಸಭೆಗಳನ್ನು ನಡೆಸಿ, ಸಂಬಂಧಿಸಿದ ಗುತ್ತಿಗೆದಾರರಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿರುವುದಾಗಿ ತಿಳಿಸಿರುತ್ತಾರೆ. |

ಸಂಖ್ಯೆ: ಲೋಇ 359 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು